ಅ) ೧೪.೦೦ ಕೋಟಿ ರೂ.ಗಳ ಅಂದಾಜು ವೆಚ್ಚದ ಸಮಗ್ರ ನೀರು ಸರಬರಾಜು ಯೋಜನೆಯನ್ನು ತಯಾರಿಸಲಾಗಿದೆ.

ಇ) ಈ ಯೋಜನೆಯ ಅಂದಾಜಿಗೆ ಮಂಗಳೂರು ಮಹಾನಗರ ಪಾಲಿಕೆಯವರು ಮೇಲು ಸಹಿಯನ್ನು ಮಾಡಿದ್ದು, ಇದರ ಪ್ರಸ್ತಾವನೆ ಜಲಮಂಡಳಿಯಿಂದ ಸರ್ಕಾರಕ್ಕೆ ಬಂದ ನಂತರದಲ್ಲಿ ಪರಿಶೀಲಿಸಲಾಗುವುದು.

ಮೈಸೂರು ನಗರ ಪಾಲಿಕೆಯಲ್ಲಿ ೩ ವರ್ಷಕ್ಕೆ ಮೇಲ್ಪಟ್ಟು ಕೆಲಸ ಮಾಡುತ್ತಿರುವ ಸರ್ಕಾರಿ ನೌಕರರು,

೧೬೧೭. ಶ್ರೀ ವೇದಾಂತ ಹೆಬ್ಬಿಗೆ.—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮೈಸೂರು ನಗರಪಾಲಿಕೆಯಲ್ಲಿ ೩ ವರ್ಷಕ್ಕೆ ಮೇಲ್ಪಟ್ಟು ಕೆಲಸ ಮಾಡುತ್ತಿರುವ ಸರ್ಕಾರಿ ನೌಕರರ ಸಂಖ್ಯೆ ಎಷ್ಟು (ಇಲಾಖಾವಾರು ವಿವರಣೆ ನೀಡುವುದು)?

ಆ) ನಗರ ಪಾಲಿಕೆಯಿಂದ ವರ್ಗವಾಗಿ ಮತ್ತೆ ಅದೇ ಸ್ಥಳಕ್ಕೆ ವರ್ಗವಾಗಿ ಬಂದಿರುವ ನೌಕರರ ಸಂಖ್ಯೆ ಎಷ್ಟು ?

ಇ) ಈ ನೌಕರರ ವರ್ಗಾವಣೆ ಬಗ್ಗೆ ಯಾವುದಾದರೂ ನಿರ್ದಿಷ್ಟ ನೀತಿಯನ್ನು ಅನುಸರಿಸುತ್ತಿದ್ದಾರೆಯೇ ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—

ಅ) ೧) ಕಂದಾಯ ಇಲಾಖೆ	...	೩
೨) ಕೆ. ಎಂ. ಎ. ಎಸ್.	...	೧
೩) ರಾಜ್ಯ ಲೆಕ್ಕಪತ್ರ ಇಲಾಖೆ	...	೯
೪) ಆರೋಗ್ಯ ಇಲಾಖೆ	...	೧೪
೫) ಲೋಕೋಪಯೋಗಿ ಇಲಾಖೆ	...	೫
ಒಟ್ಟು	...	೩೨

ಆ) ೭.

ಇ) ಸರ್ಕಾರಿ ನೌಕರರ ವರ್ಗಾವಣೆಯನ್ನು ಮಾಡುವಾಗ ದಿನಾಂಕ ೫-೯-೮೫ರ ಅಧಿಕೃತ ಜ್ಞಾಪನ ಸಂಖ್ಯೆ ಡಿಪಿಎಆರ್ ೯ ಎನ್‌ಟಿಆರ್ ೮೪ ರಲ್ಲಿ ಮತ್ತು ಈ ಕೆಳಕಂಡ ಸುತ್ತೋಲೆಗಳಲ್ಲಿ ಹೊರಡಿಸಿರುವ ವರ್ಗಾವಣೆಯ ನೀತಿಯನ್ವಯ ಪರಿಶೀಲಿಸಿ ವರ್ಗಾವಣೆಯನ್ನು ಮಾಡಲಾಗುತ್ತದೆ.

೧) ಸುತ್ತೋಲೆ ಸಂಖ್ಯೆ ಸಿಆಸುಇ ೩ ಸೇನಾವ ೮೮ ದಿನಾಂಕ ೨೩-೩-೧೯೮೮.

೨) ಸುತ್ತೋಲೆ ಸಂಖ್ಯೆ ಡಿಪಿಎಆರ್ ೫ ಸೇನಾವ ೮೮ ದಿನಾಂಕ ೨೩-೪-೧೯೮೮.

ಉತ್ತರ ಕನ್ನಡ ಜಿಲ್ಲೆಯಲ್ಲಿ ಜಿಲ್ಲಾ ಪರಿಷತ್ತಿಗೆ ಮಂಜೂರಾಗಿರುವ ಹಣದ ಬಗ್ಗೆ.

೧೬೮೨. ಶ್ರೀ ಗೋಪಾಲ ಮುಕುಂದ ಕಾನಡೆ (ಸಿರ್ಸಿ).—ಮಾನ್ಯ ಗ್ರಾಮಾಂತರಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಜಿಲ್ಲಾ ಪರಿಷತ್ತಿಗೆ ಇದುವರೆಗೆ ಮಂಜೂರಾಗಿರುವ ಹಣವೆಷ್ಟು ?